2617

ಸರ್ಕಾರದ ಕಾರ್ಯದರ್ಶಿ (ಖಜಾನೆ-2) ಆರ್ಥಿಕ ಇಲಾಖೆರವರ ಕಚೇರಿ ಹಾಗೂ ಯೋಜನಾ ನಿರ್ವಹಣಾ ಘಟಕ

ಖಜಾನೆ-2, 7ನೇ ಮಹಡಿ, ವಾಣಿಜ್ಯ ತೆರಿಗೆ ಇಲಾಖೆಗಳ ಕಟ್ಟಡ, ಗಾಂಧಿನಗರ, ಬೆಂಗಳೂರು-560 009.

ಸಂ: ಖ2/ಪಿಎಂಯು/92/2015-16 ದಿನಾಂಕ: 03.05.2017

**ಅಧಿಸೂಚನೆ**

ವಿಷಯ : ಖಜಾನೆ-2 ಅನುಷ್ಠಾನಗೊಂಡಿರುವ ಇಲಾಖೆಗಳು ಇಲಾಖಾ ಜಮೆಗಳನ್ನು ಖಜಾನೆ-2ರಲ್ಲಿಯೇ ನಿರ್ವಹಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಆಇ 03 ಟಿಎಆರ್ 2016, ದಿ:30.03.2016

2. ಸರ್ಕಾರದ ಆದೇಶ ಸಂಖ್ಯೆ: ಆಇ 03 ಟಿಎಆರ್ 2016, ದಿ:26.08.2016

3. ಸರ್ಕಾರದ ಆದೇಶ ಸಂಖ್ಯೆ: ಆಇ 03 ಟಿಎಆರ್ 2016, ದಿ:17.10.2016

********

JD (Plan) / BUD / Cash
DVP (1)

1. ಉಲ್ಲೇಖ (1), (2) & (3) ರ ಸರ್ಕಾರದ ಆದೇಶಗಳಲ್ಲಿ, ಸದರಿ ಆದೇಶಗಳ ಅನುಬಂಧದಲ್ಲಿ ಕಾಣಿಸಿರುವ 91 ಇಲಾಖೆಗಳಲ್ಲಿ ರಾಜ್ಯ ವಲಯಕ್ಕೆ ಸಂಬಂಧಿಸಿದ ವಿವಿಧ ಹಣಕಾಸಿನ ವಹಿವಾಟುಗಳನ್ನು ಅಂದರೆ ಜಮೆ, ಪಾವತಿ, ಠೇವಣಿ ಖಾತೆ ಇವುಗಳ ನಿರ್ವಹಣೆ, ಲೆಕ್ಕಗಳ ಸಮನ್ವಯ ಮುಂತಾದ ಹಣಕಾಸಿನ ವಹಿವಾಟುಗಳನ್ನು ಖಜಾನೆ-2 ರಲ್ಲಿ ನಿರ್ವಹಿಸುವಂತೆ ಆದೇಶಿಸಲಾಗಿದೆ. ಹಾಗೂ,

2. ಈ ಇಲಾಖೆಗಳ ವೇತನ ಮತ್ತು ವೇತನಕ್ಕೆ ಸಂಬಂಧಿಸಿದ ಭತ್ಯೆಗಳ ಬಿಲ್ಲುಗಳನ್ನು ಯಾವ ನಿರ್ದಿಷ್ಟ ದಿನಾಂಕದಿಂದ ಖಜಾನೆ-2ರಲ್ಲಿ ಸಲ್ಲಿಸಬೇಕು ಹಾಗೂ ಜಮೆ, ಠೇವಣಿ ಖಾತೆಗಳನ್ನು ಯಾವ ನಿರ್ದಿಷ್ಟ ದಿನಾಂಕದಿಂದ ಖಜಾನೆ-2ರಲ್ಲಿ ನಿರ್ವಹಿಸಬೇಕು ಎಂಬುದನ್ನು ಖಜಾನೆ-2ರ ಯೋಜನಾ ನಿರ್ವಹಣಾ ಘಟಕವು (PMU) ನಿಗದಿಪಡಿಸುವಂತೆ ತಿಳಿಸಲಾಗಿದೆ.

3. ಇದರಂತೆ, ಮೇಲ್ಕಂಡ 91 ಇಲಾಖೆಗಳು ತಮ್ಮ ಇಲಾಖಾ ಜಮೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಖಜಾನೆ-2ರಲ್ಲಿಯೇ ಕಡ್ಡಾಯವಾಗಿ ನಿರ್ವಹಿಸುವಂತೆ ನಿಗದಿಪಡಿಸಲಾಗಿದೆ. ಇನ್ನು ಮುಂದೆ ಈ ಇಲಾಖೆಗಳು ಇಲಾಖಾ ಜಮೆಗಳನ್ನು ಖಜಾನೆ-1ರಲ್ಲಿ ನಿರ್ವಹಿಸುವುದನ್ನು ನಿರ್ಬಂಧಿಸಲಾಗಿದೆ.

DVP(1)
12/05/17

ಸರ್ಕಾರದ ಕಾರ್ಯದರ್ಶಿಗಳು (ಖಜಾನೆ-2)
ಆರ್ಥಿಕ ಇಲಾಖೆ, ಬೆಂಗಳೂರು.

***ಪ್ರತಿಯನ್ನು :-***

1. ಸಂಬಂಧಿಸಿದ ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
2. ರಾಜ್ಯದ ಎಲ್ಲಾ ಖಜಾನಾಧಿಕಾರಿಗಳಿಗೆ ಅಗತ್ಯ ಕ್ರಮ ಹಾಗೂ ಡಿಡಿಓಗಳಿಗೆ ಮಾಹಿತಿ ನೀಡಲು.
3. ನಿರ್ದೇಶಕರು, ಖಜಾನೆ ಇಲಾಖೆ.
4. ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಕಾರ್ಯದರ್ಶಿಗಳು, (ಆ & ಸಂ), ಆರ್ಥಿಕ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಬೆಂಗಳೂರು. ಇವರಿಗೆ ಖಜಾನೆ ನೆಟ್ ನಲ್ಲಿ ಪ್ರಕಟಿಸಲು.

Received on 1/05/17 4.30pm